**ದಿನಾಂಕ: 28-06-2014 ರ ಸಭೆಯಂತೆ ಕೇಂದ್ರೀಯ ಟೆಂಡರ್ ಪರಿಶೀಲನಾ ಸಮಿತಿಯಿಂದ ಅಂಗೀಕಾರಕ್ಕಾಗಿ ಮಾನ್ಯ ವಿಶೇಷ ಆಯುಕ್ತರಿಗೆ(ಯೋಜನೆ ಮಂಡಿಸಲಾದ ಟಿಪ್ಪಣಿ**

ವಿಷಯ: : Improvements to Roads and Drains in Kashinagara cross road in ward no.7 (Byatarayanapura) in Kodigehalli sub division

***********

ಮೇಲ್ಕಾಣಿಸಿದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ), ರವರು ಮೂರನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಟೆಂಡರ್ ಪ್ರಕ್ರಿಯೆಯಲ್ಲಿ ಏಕೈಕ ಟೆಂಡರ್ ಸ್ವೀಕೃತವಾಗಿದ್ದು, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಏಕೈಕ ಟೆಂಡರ್‌ದಾರರಾದ ಶ್ರೀಂ. ಪ್ರಕಾಶ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ಕಡತದ ಕಂಡಿಕೆ ಸಂಖ್ಯೆ 22 ರಿಂದ 24 ರವರೆಗಿನ ಕಾರ್ಯಪಾಲಕ ಅಭಿಯಂತರವರ ವರದಿಯನ್ನು ಅವಗಾಹನೆಗೆ ಸಲ್ಲಿಸಿದೆ.

ರೂ. 30.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2013-14ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಸಂಬಂಧಪಟ್ಟವರಿಂದ ಪಡೆದು ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ. 29,91,049.78 ಗಳಾಗಿದ್ದು, ಮಂಜೂರಾದ ದರಗಳಿಗೆ ಏಕೈಕ ಗುತ್ತಿಗೆದಾರರಾದ ಶ್ರೀ. ಎಂ. ಪ್ರಕಾಶ್ ರವರು ರೂ. 29,91,049.78 ಗಳನ್ನು ನಮೂದಿಸಿದ್ದು, ಸದರಿ ಟೆಂಡರ್ ಮೊತ್ತವು ಶೇಕಡ 0.00% ರಷ್ಟು ದರಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ನಮೂದಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಸದರಿ ಟೆಂಡರ್‌ನ ಪ್ರಕ್ರಿಯೆಯಲ್ಲಿ ಏಕೈಕ ಟೆಂಡರ್‌ದಾರರು ಭಾಗವಹಿಸಿರುವುದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಿ ಸಂಧಾನದ ನಂತರ ಗುತ್ತಿಗೆದಾರರು ಈಗಾಗಲೇ ನಮೂದಿಸಿದ ಟೆಂಡರ್ ಮೊತ್ತಕ್ಕೆ ರೂ. 29,904.72 ಗಳಿಗೆ ರಿಯಾಯಿತಿ ನೀಡಿ ಸಂಧಾನಿತ ಟೆಂಡರ್ ಮೊತ್ತವಾದ ರೂ. 29,61,145.06 ಗಳಿಗೆ ಅನುಮೋದಿಸಲು ಕೋರಿ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರಿಗೆ ಪತ್ರ ಬರೆದಿದ್ದು, ಅದರಂತೆ ಕ್ರಮ ತೆಗೆದುಕೊಂಡು ಕಾರ್ಯಪಾಲಕ ಅಭಿಯಂತರವರ ಶಿಫಾರಸ್ಸಿನಂತೆ ಮುಖ್ಯ ಅಭಿಯಂತರರು (ಯಲಹಂಕ) ರವರು ಸದರಿ ಟೆಂಡರ್‌ನ್ನು ಅನುಮೋದಿಸಲು ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಸಂಧಾನಿತ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ. 29,61,145.06 ಗಳಾಗಿದ್ದು ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ/636/ಎಂಎನ್‌ವೈ/2010,

ದಿನಾಂಕ: 02–04–2011 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಿಗಳ ತಿದ್ದುಪಡಿಯನ್ನು ಸರ್ಕಾರದ ತಂದಿದ್ದು ಇದರಂತೆ ಮಾನ್ಯ ಆಯುಕ್ತರವರು ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ (ಮಾನ್ಯ ಆಯುಕ್ತರವರ ಆದೇಶದ ಸಂ: B12(1)/PR/394/11-12, dtd: 28-09-2013) ಸದರಿ ಟೆಂಡರ್ ಅನ್ನು ಅಂಗೀಕರಿಸುವ ಪ್ರಾಧೀಕಾರ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಏಕೈಕ ಟೆಂಡರ್ ಗುತ್ತಿಗೆದಾರರಾದ ಶ್ರೀ ಎಂ. ಪ್ರಕಾಶ್ ರವರು ಟೆಂಡರ್‌ಗಿಟ್ಟ ಮೊತ್ತದ ಮೇಲೆ ಸಂಧಾನಿತ ದರಗಳಾದ ರೂ. 29,61,145.06 ಗಳನ್ನು ಚಾಲ್ತಿ ದರಪಟ್ಟಿ 2013–14ನೇ ಸಾಲಿನ ದರಪಟ್ಟಿಗೆ ಹೋಲಿಸಿದ್ದಾಗ ಶೇಕಡ –1.00% ರಷ್ಟು ಕಡಿಮೆ ದರಗಳು ಕಂಡುಬಂದಿದ್ದು, ಸದರಿ ಟೆಂಡರ್ ಮೊತ್ತವನ್ನು ಅನುಮೋದಿಸಲು ಕೋರಿ ಪ್ರಸ್ತಾವನೆಯನನು ವಿಶೇಷ ಆಯುಕ್ತರು (ಯೋಜನೆ) ರವರ ಮುಂದೆ ಮಂಡಿಸಲು ತೀರ್ಮಾನಿಸಲಾಗಿದೆ.

28/06/14

ಪ್ರಧಾನ ಅಭಿಯಂತರರು
ಬೃ.ಬೆಂ.ಮ.ಪಾಲಿಕೆ

ಮುಖ್ಯ ಲೆಕ್ಕಾಧಿಕಾರಿಗಳು
ಬೃ.ಬೆಂ.ಮ.ಪಾಲಿಕೆ

ಮುಖ್ಯ ಅಭಿಯಂತರರು (ಯಲಹಂಕ)
ಬೃ.ಬೆಂ.ಮ.ಪಾಲಿಕೆ

Chief Engineer
Yelahanka Zone
Bruhath Bangalore Mahanagara Palike
Bangalore 92

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ